# <u>ಸಂಸಾರವೆಂಬಂಥ ಭಾಗ್ಯವಿರಲಿ</u>

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 542.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 117.
3. **Note:** This song is not available in the books of Shri Betageri Krishna Sharma and Shri Bengeri Huchha Rayaru.
4. **Note:** Lyrics given here are as per Ref. 1. The wordings in Ref. 2 are same as in Ref. 1.

ರಾಗ: ಕಾಂಭೋಜ ತಾಳ: ಅಟ

ಸಂಸಾರವೆಂಬಂಥ ಭಾಗ್ಯವಿರಲಿ || ಪ ||
ಕಂಸಾರಿ ನೆನವೆಂಬ ಸೌಭಾಗ್ಯವಿರಲಿ || ಅಪ ||

ತಂದೆ ನೀನೇ ಕೃಷ್ಣ ತಾಯಿ ಇಂದಿರೆದೇವಿ
ಪೊಂದಿದ ಅಣ್ಣನು ವನಜಸಂಭವನು
ಇಂದುಮುಖಿ ಸರಸ್ವತೀ ದೇವಿಯೆ ಅತ್ತಿಗೆಯು
ಎಂದಿಂದಿಗೂ ವಾಯುದೇವರೆ ಗುರುವು || 1 ||

ಭಾರತೀ ದೇವಿಯೆ ಗುರುಪತ್ನಿ ಎನಗೆ
ಗರುಡ ಶೇಷಾದಿಗಳೆ ಗುರುಪುತ್ರರು
ಹರಿದಾಸನೆಂಬುವರೆ ಇಷ್ಟ ಬಾಂಧವರೆನಗೆ
ಹರಿಭಜನೆ ನಡೆಯುತಿಹ ಸ್ಥಳವೆ ಮಂದಿರವು || 2 ||

ಸರುವಾಭಿಮಾನವನು ತ್ಯಜಿಸುವುದೆ ಸುಸ್ನಾನ
ಹರಿಯ ನಾಮವೆ ಇನ್ನು ಅಮೃತ ಪಾನ
ವರದ ಪುರಂದರ ವಿಠಲ ನಿನ್ನ ಪಾದ ಧ್ಯಾನ

ಕರುಣಿಸಿ ಅನವರತ ಕರಪಿಡಿದು ಕಾಯೊ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಪುರಂದರ ದಾಸರು ಊಹಿಸಿಕೊಂಡಿರುವ ಸಂಸಾರ ದೈವಗಳೊಂದಿಗೆ ಬೆಸೆದುಕೊಂಡ ಸಂಸಾರವಾಗಿದೆ. ಈ ದೈವ ಸಂಸಾರದಲ್ಲಿ ಮಗನ ಪಾತ್ರ ವಹಿಸಬಯಸುವ ಕವಿ ತುಂಬು ಸಂಸಾರದಲ್ಲಿ ವಿಷ್ಣುವನ್ನು ತಂದೆಯಾಗಿ, ಲಕ್ಷ್ಮೀಯನ್ನು ತಾಯಿಯಾಗಿ, ಬ್ರಹ್ಮನನ್ನು ಅಣ್ಣನಾಗಿ, ಸರಸ್ವತಿಯನ್ನು ಅತ್ತಿಗೆಯಾಗಿ, ವಾಯು ಭಾರತಿಯರನ್ನು ಗುರು–ಗುರುಪತ್ನಿಯರಾಗಿ, ಗರುಡ ಶೇಷಾದಿಗಳನ್ನು ಗುರು ಸೋದರರಾಗಿ, ಹರಿದಾಸರನ್ನು ನಂಟರಾಗಿ ಪಡೆಯಬಯಸುತ್ತಾನೆ. ಹರಿಭಜನೆ ನಡೆಯುವ ದೈವ ಮಂದಿರವೇ ಅವನ ಕುಟುಂಬದ ವಾಸದ ಮನೆಯಾಗುತ್ತದೆ. ಎಲ್ಲ ಬಗೆಯ ಅಭಿಮಾನಗಳ ಕೊಳೆಯನ್ನು ತೊಳೆದುಕೊಳ್ಳುವುದೇ ಅವನ ಸ್ನಾನ ಕ್ರಿಯೆಯ ಉದ್ದೇಶ. ಹರಿನಾಮ ಪಾನವೇ ಅವನ ಅಮೃತ ಆಹಾರ. ಹೀಗೆ ಸಂಸಾರವನ್ನು ಒಂದು ಪವಿತ್ರವಾದ ನೆಲೆಯಲ್ಲಿ ನಿಲ್ಲಿಸಬಯಸುತ್ತಾರೆ ಪುರಂದರ ದಾಸರು.

**ನೆನಪು** – ಸ್ಮರಣೆ.

**ವನಜಸಂಭವ** – ಬ್ರಹ್ಮ.

**ಅನವರತ** – ಎಡೆಬಿಡದೆ.

**Classification:** Keerthane
**Ankita:** purandara vittala
**Location:**
**Category:** Samsara Chitragalu
**Sub-Category:** samsara, Bhagya, kamsa, tande, Krishna, tayi, devi, brahma, saraswati, hanuma, Bharati, patni, garuda, shesha, putra, haridasa, bandhu, bhajane, abhimana, snana, amruta, Dhyana, karuna, kai,
**Pravachana:** NA
**Explanation:** Dr. A.B. Shamachar